ಪಿ.ಡಬ್ಲ್ಯೂ ಃ **1** - ಶೋಭಾ

ಸಾಕ್ಷಿಗೆ ದಿನಾಂಕಃ **30.07.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು**: 2** ನೇ ಎದುರುದಾರರ ಪರಃ ಶ್ರೀ ವಕೀಲರ ಮೂಲಕ ಃ

ಮೃತ ಬೈರೇಗೌಡರವರು ನನ್ನ ಪತಿಯಾಗಿರುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದಂತೆ ಪಡಿತರ ಚೀಟಿ ಇರುತ್ತದೆ. ಸದರಿ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನಪತಿಯನ್ನು ಬೇರೆ ಹೆಸರಿನಿಂದ ಕರೆಯುತ್ತಿರಲಿಲ್ಲ. ಅವರು ನಮಗೆ ಸೇರಿದ ಟಿ.ವಿ.ಎಸ್.ಸ್ಕೂಟರ್‌ನಲ್ಲಿ ಆ ದಿನ ಹೋಗುತ್ತಿದ್ದರು. ಅವರಿಗೆ ಡಿ.ಎಲ್. ಇತ್ತು, ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಟಿ.ವಿ.ಎಸ್. ಸ್ಕೂಟರ್‌ಗೆ ವಿಮೆಯನ್ನು ಮಾಡಿಸಿದ್ದೆವು. ಆದರೆ ಕಂಪನಿಯ ಹೆಸರು ನನಗೆ ಗೊತ್ತಿರುವುದಿಲ್ಲ. ವಿಮೆಯ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಪತಿಗೆ ಡಿ.ಎಲ್. ಇರಲಿಲ್ಲ ಮತ್ತು ಟಿ.ವಿ.ಎಸ್. ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ.

2. ದಿ: 29 ನೇ ತಾರೀಖು ಅಪಘಾತವಾಗಿದ್ದು, 4 ವರ್ಷಗಳು ಕಳೆದಿರುತ್ತವೆ. ಕೃಷ್ಣೇಗೌಡ ಎಂಬ ನನ್ನ ಮೈದುನ ಪೊಲೀಸರಿಗೆ ದೂರು ನೀಡಿರುತ್ತಾರೆ. ಅಪಘಾತವಾದ ದಿನದಂತೆ ದೂರು ನೀಡಿದ್ದು, ಪೊಲೀಸರು ತೆಗೆದುಕೊಳ್ಳದ ಕಾರಣ 3-4 ದಿನಗಳ ನಂತರ ದೂರು ನೀಡಿರುತ್ತಾರೆ. ಅಪಘಾತವಾದ ದಿನದಂದೇ ರಾತ್ರಿ ನನ್ನ ಪತಿಯು ಮೃತರಾಗಿರುತ್ತಾರೆ. ಮೊದಲು ಹಲಗೂರು ನಂತರ ಮಂಡ್ಯ ನಂತರ ಮೈಸೂರಿಗೆ ಹೋಗುವಾಗ ಮೃತರಾಗಿರುತ್ತಾರೆ. ಹಲಗೂರು ಮತ್ತು ಮಂಡ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಪತಿಯು ರಸ್ತೆ ಅಪಘಾತದಲ್ಲಿ ಮೃತರಾಗದೇ ಇರುವ ಕಾರಣ ನಾನು ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಯು ಬೇರೆ ಕಾರಣದಿಂದ ಮೃತರಾಗಿದ್ದು, ಆದ್ದರಿಂದ ನಾನು ಆಸ್ಪತ್ರೆಯ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

3. ಟಿ.ವಿ.ಎಸ್. ಸ್ಕೂಟರ್ ಅಪಘಾತ ಪಡಿಸಿರುತ್ತದೆ. ಸದರಿ ವಾಹನದ ನಂಬರ್ ನನಗೆ ಗೊತ್ತಿರುವುದಿಲ್ಲ. ಎದುರುಗಡೆ ಟಿ.ವಿ.ಎಸ್. ಸ್ಕೂಟರ್‌ನಲ್ಲಿ ಇಬ್ಬರು ಇದ್ದರು. ಯಾವ ಕಾರಣಕ್ಕೆ ಪೊಲೀಸರು ಮೊದಲು ದೂರನ್ನು ಪಡೆದಿರುವುದಿಲ್ಲವೆಂದು ನನಗೆ ಗೊತ್ತಿರುವುದಿಲ್ಲ. ಅಪಘಾತವನ್ನು ನನ್ನ ಮೈದುನ ನೋಡಿರುತ್ತಾರೆ. ಅಪಘಾತವು ದಿ: 29.07.2021 ರಂದು ಆಗಿದ್ದು, ದಿ: 07.08.2021 ರಂದು ದೂರು ನೀಡಲಾಗಿರುತ್ತದೆ. ಅಪಘಾತವಾಗಿಲ್ಲವೆಂದು ಪೊಲೀಸರು ನಮ್ಮ ದೂರನ್ನು ಆ ದಿನ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು

ಕ್ರಿಮಿನಲ್ ಕೋರ್ಟ್‌ನಲ್ಲಿ ಈ ಅಪಘಾತದ ಸಂಬಂಧವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ದೋಷಾರೋಪಣಾ ಪಟ್ಟಿಯಲ್ಲಿ 3-4 ಜನ ಸ್ವತಂತ್ರ ಸಾಕ್ಷಿದಾರರನ್ನು ಮಾಡಲಾಗಿರುತ್ತದೆ. ದೂರು ಕೊಡುವಾಗ ನಾನು ನನ್ನ ಮೈದುನನ ಜೊತೆಗೆ ಹೋಗಿರುವುದಿಲ್ಲ. ದೂರು ಕೊಡುವಾಗ ಇಬ್ಬರು ವಕೀಲರು ಪೊಲೀಸ್ ಠಾಣೆಗೆ ಹೋಗಿ ದೂರು ಪಡೆಯುವಂತೆ ಒತ್ತಡ ಹೇರಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಸಹಾಯ ಮಾಡಲು ಸದರಿ ವಕೀಲರುಗಳು ಪೊಲೀಸ್ ಠಾಣೆಗೆ ಬಂದು ಒತ್ತಡ ಹೇರಿ ದೂರು ದಾಖಲು ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 12 ರಿಂದ 17 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪತಿಯು ಅವರೇ ಬಿದ್ದು ಗಾಯ ಮಾಡಿಕೊಂಡು ಮೃತರಾಗಿರುವ ಬಗ್ಗೆ ನಿಪಿ 11 ರ ಜೊತೆ ಲಗತ್ತಿಸಿರುವ ರೆಫರೆನ್ಸ್ ದಾಖಲಕೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

4. ಹಲಗೂರು ಆಸ್ಪತ್ರೆಯ ವೈದ್ಯರಾದ ಸೌಮ್ಯ ಎಂಬುವವರು ನನ್ನ ಪತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಡಾ. ಶರತ್ ರವರು ನನ್ನ ಪತಿಯನ್ನು ನರರೋಗ ತಜ್ಞರ ಬಳಿ ಕರೆದುಕೊಂಡು ಹೋಗಲು ಹೇಳಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿಯ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಪ್ರಭಾಕರ್ ಎಂಬ ಪೊಲೀಸ್ ಅಧಿಕಾರಿಯು ದೂರನ್ನು ಪಡೆಯಲು ನಿರಾಕರಿಸಿರುತ್ತಾರೆ. ಸದರಿ ಪೊಲೀಸ್ ಅಧಿಕಾರಿಗೂ ಮತ್ತು ನಮಗೂ ದ್ವೇಷ ಇರುವುದಿಲ್ಲ. ಅಪಘಾತವಾಗದೇ ಇದ್ದ ಕಾರಣ ದೂರನ್ನು ಸ್ವೀಕರಿಸುವುದಿಲ್ಲವೆಂದು ಸದರಿ ಪೊಲೀಸ್ ಅಧಿಕಾರಿಯು ತಿಳಿಸಿದ್ದರು ಎಂದರೆ ಸರಿಯಲ್ಲ. ನನ್ನ ಪತಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ಪತಿಯು ಮದ್ಯಪಾನ ಮಾಡಿ ಸ್ಕೂಟರ್‌ನಿಂದ ಬಿದ್ದಿರುತ್ತಾರೆ ಆದ್ದರಿಂದ ದೂರನ್ನು ಪಡೆಯುವುದಿಲ್ಲವೆಂದು ಪೊಲೀಸ್ ಅಧಿಕಾರಿಯು ಹೇಳಿದ್ದರು ಎಂದರೆ ಸರಿಯಲ್ಲ. ಆ ನಂತರ ಬೇರೊಬ್ಬ ಪೊಲೀಸ್ ಅಧಿಕಾರಿಯ ಬಳಿ ಹೋಗಿ ದೂರು ನೀಡಿ 1 ನೇ ಎದುರುದಾರರನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪತಿಯ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿರುವುದಿಲ್ಲ, ಪೊಲೀಸರು ದೂರು ಪಡೆಯದ ಕಾರಣ ಆ ರೀತಿ ಮಾಡಿಸಿರುವುದಿಲ್ಲ. ರಸ್ತೆಯ ಅಪಘಾತದಿಂದ ಮೃತರಾಗಿದ್ದರೆ ಮರಣೋತ್ತರ ಪರೀಕ್ಷೆಯನ್ನು ಮಾಡಿಸುತ್ತಿದ್ದೆವು, ಆದರೆ ಅವರು ಬೇರೆ ಕಾರಣದಿಂದ ಮೃತರಾಗಿರುವುದರಿಂದ ಆ ರೀತಿ ಮಾಡಿಸಿಲ್ಲ ಎಂದರೆ ಸರಿಯಲ್ಲ.,

6. ನನ್ನ ಪತಿಯು ಕೂಲಿ ಕೆಲಸ ಮಾಡುತ್ತಿದ್ದರು. ಅವರು ತಿಂಗಳಿಗೆ 25 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರಿಗೆ ವಿವಾಹವಾಗಿದ್ದು,

ಕೂಲಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಕುಟುಂಬದ ಜೊತೆ ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಅರ್ಜಿದಾರರು ಪ್ರಕರಣ ಸಲ್ಲಿಸಿದ ನಂತರ ಮೃತರಾಗಿರುತ್ತಾರೆ. ನನ್ನಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಘಟನೆ ನಡೆಯದೇ ಇದ್ದರೂ ಸಹ ಅದನ್ನು ಸೃಷ್ಟಿ ಮಾಡಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

7. ಸಾತನೂರು ಬೂವಳ್ಳಿಯವರು ಅಪಘಾತ ಪಡಸಿದ ವ್ಯಕ್ತಿಯಾಗಿರುತ್ತಾರೆ. ಅವರು ನನಗೆ ಮತ್ತು ನನ್ನ ಮೈದುನನಿಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿಂತೆ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.